# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

### ಸ್ಪೆಷಲ್ ಕೇಸ್ ನಂ. 27/2020

**ದೋ.ಸಾ. : 2 ಫ್ರಾ.ಸಾ. : 9**

| | | |
|---|---|---|
| ಸಾಕ್ಷಿಯ ಹೆಸರು | : | ಹುಸೇನ್ ಸಾಬ್ |
| ತಂದೆ ಹೆಸರು | : | ಬಕ್ರ ಸಾಬ ಹಟ್ಟಿಮನಿ |
| ವಯಸ್ಸು | : | 30 ವರ್ಷ |
| ಕೆಲಸ | : | ರೈತಾಪಿ |
| ವಾಸ | : | ಗುಂಜಾವತಿ, ಮುಂಡಗೋಡ |

**ದಿನಾಂಕಃ 19–12–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ–**

1. ಪೊಲೀಸರು ನನ್ನನ್ನು ಪಂಚನಾಮೆಗೆ ಕರೆದಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ನಕಾಶೆ ತಯಾರಿಸಿಲ್ಲ, ಫೋಟೊ ತೆಗೆದಿಲ್ಲ ಹಾಗೂ ಯಾವುದೇ ವಸ್ತುವನ್ನೂ ಸಹ ಜಪ್ತುಪಡಿಸಿಕೊಂಡಿಲ್ಲ, ನಿಪಿ–2 ಪಂಚನಾಮೆ ಮತ್ತು ನಿಪಿ–3 ನಕಾಶೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–2(ಸಿ) ಮತ್ತು ನಿಪಿ–3(ಸಿ) ಎಂದು ಗುರುತಿಸಲಾಯಿತು. ನಿಪಿ–4 ಫೋಟೊದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮುಂದುವರಿದು ಸದರಿ ಫೋಟೊವನ್ನು ಯಾರು, ಯಾವಾಗ, ಎಲ್ಲಿ ತೆಗೆದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸುಮಾರು 6 ವರ್ಷಗಳ ಹಿಂದೆ ನಾನು ಮುಂಡಗೋಡದ ಬಸ್ ನಿಲ್ದಾಣ ಬಳಿ ಇದ್ದಾಗ ಪೊಲೀಸರು ನನ್ನ ಎರಡು ಸಹಿಗಳನ್ನು ಪಡೆದಿರುತ್ತಾರೆ. ಆದರೆ, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-</u>**

2.ದಿ.17-04-2019 ರಂದು ಪೊಲೀಸರು ನನ್ನನ್ನು ಮುಂಡಗೋಡದ ಗುಂಜಾವತಿ ಗ್ರಾಮದಲ್ಲಿ ಗೌಸ್ ಮೊಹಿದ್ದೀನ್ ದರ್ಗಾದಲ್ಲಿ ಪಂಚನಾಮೆಗೆ ಕರೆದಿದ್ದರು ಎಂದರೆ ಸರಿಯಲ್ಲ. ಅಲ್ಲಿ ಚಾಸಾ-1 ರವರು ಹಾಜರಿದ್ದು, ಗಲಾಟೆಯಾದ ಜಾಗವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆಯ ಸಮಯದಲ್ಲಿ ತಾನು ಧರಿಸಿದ್ದ ಶರ್ಟನ್ನು ಚಾಸಾ-1 ರವರು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ತೋರಿಸುತ್ತಿರುವ ಶರ್ಟನ್ನು ನಾನು ನೋಡಿರುವುದಿಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ನಿಪಿ-2 ರಂತೆ ಪಂಚನಾಮೆ ಮಾಡಿ, ನಿಪಿ-3 ರಂತೆ ನಕಾಶೆ ತಯಾರಿಸಿ, ನಿಪಿ-4 ರಂತೆ ಫೋಟೊ ತೆಗೆದಿದ್ದರೂ ಸಹ ಹಾಗೂ ಚಾಸಾ-1 ರವರು ಹಾಜರುಪಡಿಸಿದ ಶರ್ಟನ್ನು ಜಪ್ತುಪಡಿಸಿಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಡಿ.ಡಿ.ಕೆ ವಕೀಲರಿಂದಃ-</u>**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ